**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.**

**ಸಂಖ್ಯೆ: ಪಪೂಶಿ/ಲೆಪ-03/ NDSS/2020-21** **ದಿನಾಂಕ: 20-06-2020.**

## ಸುತ್ತೋಲೆ

ವಿಷಯ:- 2020-21ನೇ ಸಾಲಿನಿಂದ ಜಾರಿಯಾಗಲಿರುವ ನೂತನ ಡಿಎಸ್ಎಸ್ (NDSS) ತಂತ್ರಾಂಶದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅನುದಾನ ಹಂಚಿಕೆ ಅಪ್‌ಲೋಡ್ ಮಾಡಲು ಡಿಡಿಒ ರಿಂದ ಮಾಹಿತಿ ಪಡೆಯುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 15 ಎಂಪಿಇ 2020, ದಿನಾಂಕ: 27-02-2020, ಮತ್ತು 19-05-2020.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 15 ಎಂಪಿಇ2020, ದಿ: 10-06-2020.
3. ಈ ಕಛೇರಿ ಸಮಸಂಖ್ಯೆ ಸುತ್ತೋಲೆ ದಿನಾಂಕ: 12-06-2020.

2020-21ನೇ ಸಾಲಿನ ಏಪ್ರಿಲ್ ನಿಂದ ನೂತನ ಡಿಎಸ್ಎಸ್ ತಂತ್ರಾಂಶವನ್ನು *(ಅವಲೋಕನ)* ಅನುಷ್ಠಾನಗೊಳಿಸಲಾಗುತ್ತಿರುವ ಹಿನ್ನೆಲೆಯಲ್ಲಿ, ಇ-ಆಡಳಿತ ಇಲಾಖೆಯಿಂದ KODI Platform (Karnataka Open Data initiative) ಎಲ್ಲಾ ಇಲಾಖೆಗಳ ತಂತ್ರಾಂಶಗಳ ಸಮೀಕರಣ ಮಾಡಲು ಅನುವಾಗುವಂತೆ, ತಂತ್ರಾಂಶ ರೂಪಿಸಲಾಗಿದ್ದು, ಪದವಿ ಪೂರ್ವ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಡಿಡಿಒ (ಬಟವಾಡೆ ಅಧಿಕಾರಿಗಳು) ತಾವು ಖಜಾನೆಗೆ ಬಿಲ್ಲು ಸಲ್ಲಿಸಿ ಹಣ ಸೆಳೆಯುವ ಪ್ರತಿ ಲೆಕ್ಕಶೀರ್ಷಿಕೆಯಡಿ (ವೇತನವೂ ಒಳಗೊಂಡಂತೆ) ವೆಚ್ಚ ನಿರ್ವಹಿಸುವಂತೆ ಮಾಹೆಯಾನ ಭೌತಿಕ ಪ್ರಗತಿಯನ್ನು ನಮೂದಿಸುವ ಮೂಲಕ ನೂತನ ಡಿಎಸ್ಎಸ್ ತಂತ್ರಾಂಶ, ಅನುಷ್ಠಾನವನ್ನು ಯಶಸ್ವಿಗೊಳಿಸಬೇಕಿರುತ್ತದೆ ಎಂಬ ಅಂಶವನ್ನು ಎಲ್ಲಾ ಬಟವಾಡೆ ಅಧಿಕಾರಿಗಳಿಗೂ ಉಲ್ಲೇಖ (3)ರ ಸುತ್ತೋಲೆಯಲ್ಲಿ ಈಗಾಗಲೇ ವಿವರಿಸಲಾಗಿದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ *ಅವಲೋಕನ* ತಂತ್ರಾಂಶ ಅನುಷ್ಠಾನದ ಪ್ರಥಮ ಹಂತದಲ್ಲಿ HOD ಲಾಗಿನ್‌ನಿಂದ ಎಲ್ಲಾ 1255 ಡಿಡಿಒ ರಡಿ ಪ್ರತೀ ಲೆಕ್ಕಶೀರ್ಷಿಕೆಗೆ ಉಪಶೀರ್ಷಿಕೆವಾರು (ವೇತನವೂ ಒಳಗೊಂಡಂತೆ) 2020-21ನೇ ಸಾಲಿಗೆ ಆಯವ್ಯಯವನ್ನು ಅಪ್‌ಲೋಡ್ ಮಾಡಬೇಕಿರುತ್ತದೆ. ಪ್ರತಿ ಡಿಡಿಒ ಗೆ ಪ್ರತ್ಯೇಕವಾಗಿ ವೇತನ ಭತ್ಯೆಗಳಿಗೆ ಆಯವ್ಯಯವನ್ನು ಅಂದಾಜಿಸುವುದು ಕಷ್ಟಸಾಧ್ಯವಿರುತ್ತದೆ. ಆದ್ದರಿಂದ, ಸದರಿ ಮಾಹಿತಿಯನ್ನು ಆಯಾ ಬಟವಾಡೆ ಅಧಿಕಾರಿಗಳಿಂದಲೇ ನೇರವಾಗಿ ಪಡೆದು, ಕ್ರೋಢೀಕರಿಸಿ ಸದರಿ ಮಾಹಿತಿಗಳನ್ನು Excel Worksheet ಗೆ ವರ್ಗಾಯಿಸಿಕೊಂಡು HOD ಹಂತದಲ್ಲಿ ಮತ್ತೊಮ್ಮೆ ಪರಿಶೀಲಿಸಿ ಸದರಿ ತಂತ್ರಾಂಶದಲ್ಲಿ HOD_ಲಾಗಿನ್‌ನಿಂದ ಅಪ್‌ಲೋಡ್ ಮಾಡಲು ಅನುಕೂಲವಾಗುವಂತೆ PU Portal ನಲ್ಲಿ ಒಂದು Page ನ್ನು ಅಭಿವೃದ್ಧಿಪಡಿಸಲಾಗಿದೆ. ನೇರವಾಗಿ ಆಯಾ ಡಿಡಿಒಗಳೇ ತಾವು ಪ್ರತಿ ವರ್ಷ ಅನುದಾನ ಪಡೆಯುವ ಮೊತ್ತವನ್ನು ಆಧರಿಸಿ 2020-21 ನೇ ಸಾಲಿನ ಪೂರ್ಣ ವರ್ಷಕ್ಕೆ ಅಂದಾಜಿಸಿ ಆಯವ್ಯಯವನ್ನು **ರೂ.ಗಳಲ್ಲಿ ನಮೂದಿಸಲು** ಸೂಚಿಸಿದೆ. ಈ ಸುತ್ತೋಲೆಯೊಂದಿಗೆ 2 ಅನುಬಂಧಗಳನ್ನು ಲಗತ್ತಿಸಿ ಜಿಲ್ಲಾ ಉಪನಿರ್ದೇಶಕರುಗಳಿಗೆ (ಅನುಬಂಧ-1) ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಿಗೆ (ಅನುಬಂಧ-2) ಪ್ರತ್ಯೇಕವಾಗಿ ಮಾಹಿತಿಗಳನ್ನು ನೀಡಲಾಗಿದ್ದು ಅವುಗಳನ್ನು ಸಮಗ್ರವಾಗಿ ಪರಿಶೀಲಿಸಿ 2020-21ನೇ ಸಾಲಿನ ಆಯವ್ಯಯ ಅಂದಾಜನ್ನು ನಮೂದಿಸಲು ಸೂಚಿಸಿದೆ. ಸದರಿ ಪ್ರಕ್ರಿಯೆಯನ್ನು **ದಿನಾಂಕ: 24-06-2020 ಸಂಜೆ 5.00 ಗಂಟೆಯೊಳಗಾಗಿ** ಪೂರ್ಣಗೊಳಿಸುವುದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

**ರವರಿಗೆ,**

**ಇಲಾಖೆಯ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ - ಮುಂದಿನ ಸೂಕ್ತ ಕ್ರಮಕ್ಕಾಗಿ,**

ರವರಿಗೆ,

1. ಲೆಕ್ಕಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.-ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ,

## ಅನುಬಂಧ-1 (ಜಿಲ್ಲಾ ಉಪನಿರ್ದೇಶಕರುಗಳಿಗೆ)

| ಕ್ಕಶೀರ್ಷಿಕೆ | ವಿವರಣೆ | ಅನುದಾನದ ಮೊತ್ತದ ಲೆಕ್ಕಾಚಾರ ಮಾಡಲು ವಿವರಣೆ | ಫಲಾನುಭವಿ ಸಂಖ್ಯೆ (**Beneficiary**) ನಮೂದಿಸಲು ಷರಾ |
|---|---|---|---|
| 01-0-01 002 | ಜಿಲ್ಲಾ ಉಪನಿರ್ದೇಶಕರು ಮತ್ತು ಉ.ನಿ.ಕಚೇರಿ ಅಧಿಕಾರಿ ವೇತನ | 2020-21ನೇ ಸಾಲಿಗೆ ಮಾರ್ಚ್ 2020ರಿಂದ ಫೆಬ್ರವರಿ 2021ರವರೆಗೆ ಅವಶ್ಯಕವಿರುವ ಅನುದಾನ (ಈಗಾಗಲೇ ಮಾರ್ಚ್ ವೇತನ ಪಾವತಿಯನ್ನು ಆಧರಿಸಿ ಹಾಗೂ ಜುಲೈ ಮಾಹೆಯಿಂದ ವೇತನ ಭಡ್ತಿಯನ್ನು ಆಧರಿಸಿ ಲೆಕ್ಕಾಚಾರ ಮಾಡುವುದು | ವೇತನ ಪಾವತಿಸಲಾದ ಅಧಿಕಾರಿಗಳ ಸಂಖ್ಯೆ |
| 01-0-01 003 | ಉ.ನಿ.ಕಚೇರಿ ಸಿಬ್ಬಂದಿ ವೇತನ | | ವೇತನ ಪಾವತಿಸಲಾದ ಸಿಬ್ಬಂದಿ ಸಂಖ್ಯೆ |
| 01-0-01 011 | ತುಟ್ಟಿ ಭತ್ಯೆ | | –"– |
| 01-0-01 014 | ಇತರೆ ಭತ್ಯೆ | | –"– |
| 01-0-01 020 | ವೈದ್ಯಕೀಯ ಭತ್ಯೆ | | –"– |
| 01-0-01 021 | ವೈದ್ಯಕೀಯ ವೆಚ್ಚ ಮರುಪಾವತಿ | 2019-20ನೇ ಸಾಲಿನ ಅನುದಾನ ಮರುಹಂಚಿಕೆಯನ್ನು ಆಧರಿಸಿ ಅಂದಾಜು | ಫಲಾನುಭವಿಗಳ ಸಂಖ್ಯೆ |
| 01-0-01 034 | ಜಿಲ್ಲಾ ಉ.ನಿ.ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ವಾಹನ ಚಾಲಕರ ಸಂಭಾವನೆ | ವಾಸ್ತವ ಅಂದಾಜು | ಫಲಾನುಭವಿಗಳ ಸಂಖ್ಯೆ |
| 01-0-01 041 | ಪ್ರಯಾಣ ಭತ್ಯೆ | 2019-20ನೇ ಸಾಲಿನ ಅನುದಾನ ಮರುಹಂಚಿಕೆಯನ್ನು ಆಧರಿಸಿ ಅಂದಾಜು | ಫಲಾನುಭವಿಗಳ ಸಂಖ್ಯೆ |
| 01-0-01 051 | ಸಾದಿಲ್ವಾರು ವೆಚ್ಚ ಮತ್ತು ವಾಹನ ಬಾಡಿಗೆ ವೆಚ್ಚ | 2019-20ನೇ ಸಾಲಿನ ಅನುದಾನ ಮರುಹಂಚಿಕೆಯನ್ನು ಆಧರಿಸಿ ಅಂದಾಜು | ಆಡಳಿತ ವೆಚ್ಚ |
| 01-0-01 052 | ದೂರವಾಣಿ ವೆಚ್ಚ | –"– | ಆಡಳಿತ ವೆಚ್ಚ |
| 01-0-01 053 | ಪೀಠೋಪಕರಣ ವೆಚ್ಚ | –"– | ಆಡಳಿತ ವೆಚ್ಚ |
| 01-0-01 059 | ಉಪನ್ಯಾಸಕರ ತರಬೇತಿ ಕಾರ್ಯಕ್ರಮ/ಶೈಕ್ಷಣಿಕ ಸುಧಾರಣಾ ವೆಚ್ಚ | –"– | ಫಲಾನುಭವಿಗಳ ಸಂಖ್ಯೆ |
| 01-0-01 071 | ಜಿಲ್ಲಾಡಳಿತ ಭವನದಲ್ಲಿ ಕಚೇರಿ ನಿರ್ವಹಣೆ ವೆಚ್ಚ | ವಾಸ್ತವ ಅಂದಾಜು | ಆಡಳಿತ ವೆಚ್ಚ |
| 01-0-01 195 | ಕಛೇರಿ ವಾಹನಕ್ಕೆ ಇಂಧನ/ರಿಪೇರಿ ವೆಚ್ಚ | ವಾಸ್ತವ ಅಂದಾಜು | ಆಡಳಿತ ವೆಚ್ಚ |

| | | | | |
|---|---|---|---|---|
| 0-01 | 015 | ವಿಶೇಷ ಜಾಗೃತದಳ ಅಧಿಕಾರಿ ಸಿಬ್ಬಂದಿ ಮತ್ತು ಇತರೆ ಪರೀಕ್ಷಾ ಕಾರ್ಯ ನಿರ್ವಹಿಸಿದ ಅಧಿಕಾರಿ ಸಿಬ್ಬಂದಿಯವರಿಗೆ ಸಂಭಾವನೆ ವೆಚ್ಚ | ವಾಸ್ತವವಾಗಿ 2020 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಅಧಿಕಾರಿ/ಸಿಬ್ಬಂದಿ ಲೆಕ್ಕಾಚಾರದಂತೆ ಹಾಗೂ ಪರೀಕ್ಷಾ ಕೇಂದ್ರ ಸಾದಿಲ್ವಾರು ಇತರೆ ಸಾಮಗ್ರಿ ಮತ್ತು ಸರಬರಾಜು ವೆಚ್ಚಗಳನ್ನು ಆಧರಿಸಿ 2020-21ನೇ ಸಾಲಿಗೆ ಅಗತ್ಯ ಅನುದಾನ (ಡಿಡಿಒ ರಡಿ ನಿರ್ವಹಣೆಯಾಗುವ ವೆಚ್ಚ ಮಾತ್ರ) | ಫಲಾನುಭವಿಗಳ ಸಂಖ್ಯೆ |
| 0-01 | 041 | ವಿಶೇಷ ಜಾಗೃತದಳ ಅಧಿಕಾರಿ ಸಿಬ್ಬಂದಿ ಮತ್ತು ಇತರೆ ಪರೀಕ್ಷಾ ಕಾರ್ಯ ನಿರ್ವಹಿಸಿದ ಅಧಿಕಾರಿ ಸಿಬ್ಬಂದಿಯವರಿಗೆ ಪ್ರಯಾಣ ಭತ್ಯೆ ವೆಚ್ಚ | | ಫಲಾನುಭವಿಗಳ ಸಂಖ್ಯೆ |
| 0-01 | 221 | ಸಾಮಗ್ರಿ ಮತ್ತು ಸರಬರಾಜು ವೆಚ್ಚ/ಪರೀಕ್ಷಾ ಕೇಂದ್ರಗಳಿಗೆ ಸಾದಿಲ್ವಾರು ವೆಚ್ಚ | | ಫಲಾನುಭವಿಗಳ ಸಂಖ್ಯೆ |
| -01 | 101 | ಅನುದಾನಿತ ಪ.ಪೂ. ಕಾಲೇಜು ಸಿಬ್ಬಂದಿ ವೇತನ | ಅನುದಾನಿತ ಪ.ಪೂ. ಕಾಲೇಜು ಸಿಬ್ಬಂದಿ ವೇತನ ಪಾವತಿಸಲು ವಾಸ್ತವವಾಗಿ ಅಗತ್ಯವಿರುವ ಮೊತ್ತ (ಮಾರ್ಚ್ ವೇತನ ಪಾವತಿಯನ್ನು ಆಧರಿಸಿ ಹಾಗೂ ಜುಲೈ ಮಾಹೆಯಿಂದ ವೇತನ ಭಡ್ತಿಯನ್ನು ಆಧರಿಸಿ ಲೆಕ್ಕಾಚಾರ ಮಾಡುವುದು) | ವೇತನ ಪಾವತಿಸಲಾದ ಅನುದಾನಿತ ಪ.ಪೂ. ಕಾಲೇಜು ಸಿಬ್ಬಂದಿ ಸಂಖ್ಯೆ |

## ಅನುಬಂಧ-2 (ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರುಗಳಿಗೆ)

| ಲೆಕ್ಕಶೀರ್ಷಿಕೆ | | ವಿವರಣೆ | ಅನುದಾನದ ಮೊತ್ತದ ಲೆಕ್ಕಾಚಾರ ಮಾಡಲು ವಿವರಣೆ | ಫಲಾನುಭವಿ ಸಂಖ್ಯೆ (Beneficiary) [illegible] |
|---|---|---|---|---|
| 108-0-01 | 015 | ವಿಶೇಷ ಜಾಗೃತದಳ ಅಧಿಕಾರಿ ಸಿಬ್ಬಂದಿ ಮತ್ತು ಇತರೆ ಪರೀಕ್ಷಾ ಕಾರ್ಯ ನಿರ್ವಹಿಸಿದ ಅಧಿಕಾರಿ ಸಿಬ್ಬಂದಿಯವರಿಗೆ ಸಂಭಾವನೆ ವೆಚ್ಚ | ವಾಸ್ತವವಾಗಿ 2020 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಅಧಿಕಾರಿ/ಸಿಬ್ಬಂದಿ ಲೆಕ್ಕಾಚಾರದಂತೆ ಹಾಗೂ ಪರೀಕ್ಷಾ ಕೇಂದ್ರ ಸಾದಿಲ್ವಾರು ಇತರೆ ಸಾಮಗ್ರಿ ಮತ್ತು ಸರಬರಾಜು ವೆಚ್ಚಗಳನ್ನು ಆಧರಿಸಿ 2020-21ನೇ ಸಾಲಿಗೆ ಅಗತ್ಯ ಅನುದಾನ | ಫಲಾನುಭವಿಗಳ ಸಂಖ್ಯೆ |
| 108-0-01 | 041 | ವಿಶೇಷ ಜಾಗೃತದಳ ಅಧಿಕಾರಿ ಸಿಬ್ಬಂದಿ ಮತ್ತು ಇತರೆ ಪರೀಕ್ಷಾ ಕಾರ್ಯ ನಿರ್ವಹಿಸಿದ ಅಧಿಕಾರಿ ಸಿಬ್ಬಂದಿಯವರಿಗೆ ಪ್ರಯಾಣ ಭತ್ಯೆ ವೆಚ್ಚ | | ಫಲಾನುಭವಿಗಳ ಸಂಖ್ಯೆ |
| 108-0-01 | 221 | ಸಾಮಗ್ರಿ ಮತ್ತು ಸರಬರಾಜು ವೆಚ್ಚ/ಪರೀಕ್ಷಾ ಕೇಂದ್ರಗಳಿಗೆ ಸಾದಿಲ್ವಾರು ವೆಚ್ಚ | | ಫಲಾನುಭವಿಗಳ ಸಂಖ್ಯೆ |
| 108-0-01 | 422 | ವಿಶ್ವಾಸ ಕಿರಣ ಕಾರ್ಯಕ್ರಮ | 2019-20ನೇ ಸಾಲಿನ ಅನುದಾನ ಮರುಹಂಚಿಕೆಯನ್ನು ಆಧರಿಸಿ ಶೇ 5 ರಷ್ಟು ಹೆಚ್ಚುವರಿ | ಫಲಾನುಭವಿಗಳ ಸಂಖ್ಯೆ |
| 108-0-01 | 423 | ವಿಶ್ವಾಸ ಕಿರಣ ಕಾರ್ಯಕ್ರಮ | | ಫಲಾನುಭವಿಗಳ ಸಂಖ್ಯೆ |
| 109-0-13 | 002 | ಪ್ರಾಂಶುಪಾಲರು/ಉಪನ್ಯಾಸಕರ ಮೂಲ ವೇತನ | 2020-21ನೇ ಸಾಲಿಗೆ ಮಾರ್ಚ್ 2020ರಿಂದ ಫೆಬ್ರವರಿ 2021ರವರೆಗೆ ಅವಶ್ಯಕವಿರುವ ಅನುದಾನ (ಈಗಾಗಲೇ ಮಾರ್ಚ್ ವೇತನ ಪಾವತಿಯನ್ನು ಆಧರಿಸಿ ಹಾಗೂ ಜುಲೈ ಮಾಹೆಯಿಂದ ವೇತನ ಭಡ್ತಿಯನ್ನು ಆಧರಿಸಿ ಲೆಕ್ಕಾಚಾರ ಮಾಡುವುದು | ವೇತನ ಪಾವತಿಸಲಾದ ಪ್ರಾಂಶುಪಾಲರು ಮತ್ತು ಉಪನ್ಯಾಸಕರುಗಳ ಒಟ್ಟಾರೆ ಸಂಖ್ಯೆ |
| 109-0-13 | 003 | ಸಿಬ್ಬಂದಿ ಮೂಲ ವೇತನ | | ವೇತನ ಪಾವತಿಸಲಾದ ಗ್ರೂಪ್-ಸಿ ಮತ್ತು ಗ್ರೂಪ್-ಡಿ ಸಿಬ್ಬಂದಿಯ ಸಂಖ್ಯೆ |
| 109-0-13 | 011 | ತುಟ್ಟಿ ಭತ್ಯೆ | | ಒಟ್ಟಾರೆ ಸಂಖ್ಯೆ |
| 109-0-13 | 014 | ಇತರೆ ಭತ್ಯೆ | | ಒಟ್ಟಾರೆ ಸಂಖ್ಯೆ |
| 109-0-13 | 020 | ವೈದ್ಯಕೀಯ ಭತ್ಯೆ | | ಒಟ್ಟಾರೆ ಸಂಖ್ಯೆ |
| 109-0-13 | 021 | ವೈದ್ಯಕೀಯ ವೆಚ್ಚ ಮರುಪಾವತಿ | 2019-20ನೇ ಸಾಲಿನ ಅನುದಾನ ಮರುಹಂಚಿಕೆಯನ್ನು ಆಧರಿಸಿ ಅಂದಾಜು | ಫಲಾನುಭವಿಗಳ ಸಂಖ್ಯೆ (ಅಂದಾಜು) |
| 109-0-13 | 034 | ಅತಿಥಿ ಉಪನ್ಯಾಸಕರ ಸಂಭಾವನೆ | ವಾಸ್ತವ ನಿಯೋಜನೆಯಂತೆ ಲೆಕ್ಕಾಚಾರ | ಫಲಾನುಭವಿಗಳ ಸಂಖ್ಯೆ |
| 109-0-13 | 041 | ಪ್ರಯಾಣ ಭತ್ಯೆ | 2019-20 ನೇ ಸಾಲಿಗೆ ಜಿಲ್ಲಾ ಉಪನಿರ್ದೇಶಕರಿಂದ ಮರುಹಂಚಿಕೆಯಾದ ಅನುದಾನ ಮೊತ್ತವನ್ನು ಆಧರಿಸಿ ಶೇ 5 ರಷ್ಟು ಹೆಚ್ಚುವರಿ | ಆಡಳಿತ ವೆಚ್ಚ |
| 109-0-13 | 051 | ಸಾದಿಲ್ವಾರು | | ಆಡಳಿತ ವೆಚ್ಚ |
| 109-0-13 | 071 | ಕಟ್ಟಡ ವೆಚ್ಚ | | ಆಡಳಿತ ವೆಚ್ಚ |
| 107-3-02 | 103 | ವಿದ್ಯಾರ್ಥಿನಿಯರಿಗೆ ಸರ್ಕಾರೇತರ ಶುಲ್ಕ ಮರುಪಾವತಿ | 2019-20ನೇ ಸಾಲಿನಲ್ಲಿ ವಿದ್ಯಾರ್ಥಿನಿಯರ ಸರ್ಕಾರೇತ ಶುಲ್ಕ ಮರುಪಾವತಿಸಲಾದ ಒಟ್ಟಾರೆ ವಿದ್ಯಾರ್ಥಿನಿಯರ ಸಂಖ್ಯೆಗೆ ಶೇ 5 ರಷ್ಟು ಹೆಚ್ಚುವರಿಗೊಳಿಸಿ ಪ್ರತಿ ವಿದ್ಯಾರ್ಥಿನಿಯರಿಗೆ ತಲಾ ರೂ. 456 ರಂತೆ ಲೆಕ್ಕಾಚಾರ ಮಾಡುವುದು. | ಫಲಾನುಭವಿಗಳ ಸಂಖ್ಯೆ |

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.**

**ಸಂಖ್ಯೆ: ಪಪೂಶಿ/ಲೆಪ-03/ NDSS/2020-21** **ದಿನಾಂಕ: 20-06-2020.**

**ಸುತ್ತೋಲೆ**

ವಿಷಯಃ- 2020-21ನೇ ಸಾಲಿನಿಂದ ಜಾರಿಯಾಗಲಿರುವ ನೂತನ ಡಿಎಸ್ಎಸ್ (NDSS) ತಂತ್ರಾಂಶದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅನುದಾನ ಹಂಚಿಕೆ ಅಪ್‌ಲೋಡ್ ಮಾಡಲು ಡಿಡಿಒ ರಿಂದ ಮಾಹಿತಿ ಪಡೆಯುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 15 ಎಂಪಿಇ 2020, ದಿನಾಂಕ: 27-02-2020, ಮತ್ತು 19-05-2020.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಇಪಿ 15 ಎಂಪಿಇ2020, ದಿ: 10-06-2020.
3. ಈ ಕಛೇರಿ ಸಮಸಂಖ್ಯೆ ಸುತ್ತೋಲೆ ದಿನಾಂಕ: 12-06-2020.

2020-21ನೇ ಸಾಲಿನ ಏಪ್ರಿಲ್ ನಿಂದ ನೂತನ ಡಿಎಸ್ಎಸ್ ತಂತ್ರಾಂಶವನ್ನು *(ಅವಲೋಕನ)* ಅನುಷ್ಠಾನಗೊಳಿಸಲಾಗುತ್ತಿರುವ ಹಿನ್ನೆಲೆಯಲ್ಲಿ, ಇ-ಆಡಳಿತ ಇಲಾಖೆಯಿಂದ KODI Platform (Karnataka Open Data initiative) ಎಲ್ಲಾ ಇಲಾಖೆಗಳ ತಂತ್ರಾಂಶಗಳ ಸಮೀಕರಣ ಮಾಡಲು ಅನುವಾಗುವಂತೆ, ತಂತ್ರಾಂಶ ರೂಪಿಸಲಾಗಿದ್ದು, ಪದವಿ ಪೂರ್ವ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಡಿಡಿಒ (ಬಟವಾಡೆ ಅಧಿಕಾರಿಗಳು) ತಾವು ಖಜಾನೆಗೆ ಬಿಲ್ಲು ಸಲ್ಲಿಸಿ ಹಣ ಸೆಳೆಯುವ ಪ್ರತಿ ಲೆಕ್ಕಶೀರ್ಷಿಕೆಯಡಿ (ವೇತನವೂ ಒಳಗೊಂಡಂತೆ) ವೆಚ್ಚ ನಿರ್ವಹಿಸುವಂತೆ ಮಾಹೆಯಾನ ಭೌತಿಕ ಪ್ರಗತಿಯನ್ನು ನಮೂದಿಸುವ ಮೂಲಕ ನೂತನ ಡಿಎಸ್ಎಸ್ ತಂತ್ರಾಂಶ, ಅನುಷ್ಠಾನವನ್ನು ಯಶಸ್ವಿಗೊಳಿಸಬೇಕಿರುತ್ತದೆ ಎಂಬ ಅಂಶವನ್ನು ಎಲ್ಲಾ ಬಟವಾಡೆ ಅಧಿಕಾರಿಗಳಿಗೂ ಉಲ್ಲೇಖ (3)ರ ಸುತ್ತೋಲೆಯಲ್ಲಿ ಈಗಾಗಲೇ ವಿವರಿಸಲಾಗಿದೆ.

ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ *ಅವಲೋಕನ* ತಂತ್ರಾಂಶ ಅನುಷ್ಠಾನದ ಪ್ರಥಮ ಹಂತದಲ್ಲಿ HOD ಲಾಗಿನ್‌ನಿಂದ ಎಲ್ಲಾ 1255 ಡಿಡಿಒ ರಡಿ ಪ್ರತೀ ಲೆಕ್ಕಶೀರ್ಷಿಕೆಗೆ ಉಪಶೀರ್ಷಿಕೆವಾರು (ವೇತನವೂ ಒಳಗೊಂಡಂತೆ) 2020-21ನೇ ಸಾಲಿಗೆ ಆಯವ್ಯಯವನ್ನು ಅಪ್‌ಲೋಡ್ ಮಾಡಬೇಕಿರುತ್ತದೆ. ಪ್ರತಿ ಡಿಡಿಒ ಗೆ ಪ್ರತ್ಯೇಕವಾಗಿ ವೇತನ ಭತ್ಯೆಗಳಿಗೆ ಆಯವ್ಯಯವನ್ನು ಅಂದಾಜಿಸುವುದು ಕಷ್ಟಸಾಧ್ಯವಿರುತ್ತದೆ. ಆದ್ದರಿಂದ, ಸದರಿ ಮಾಹಿತಿಯನ್ನು ಆಯಾ ಬಟವಾಡೆ ಅಧಿಕಾರಿಗಳಿಂದಲೇ ನೇರವಾಗಿ ಪಡೆದು, ಕ್ರೋಢೀಕರಿಸಿ ಸದರಿ ಮಾಹಿತಿಗಳನ್ನು Excel Worksheet ಗೆ ವರ್ಗಾಯಿಸಿಕೊಂಡು HOD ಹಂತದಲ್ಲಿ ಮತ್ತೊಮ್ಮೆ ಪರಿಶೀಲಿಸಿ ಸದರಿ ತಂತ್ರಾಂಶದಲ್ಲಿ HOD_ಲಾಗಿನ್‌ನಿಂದ ಅಪ್‌ಲೋಡ್ ಮಾಡಲು ಅನುಕೂಲವಾಗುವಂತೆ PU Portal ನಲ್ಲಿ ಒಂದು Page ನ್ನು ಅಭಿವೃದ್ಧಿಪಡಿಸಲಾಗಿದೆ. ನೇರವಾಗಿ ಆಯಾ ಡಿಡಿಒಗಳೇ ತಾವು ಪ್ರತಿ ವರ್ಷ ಅನುದಾನ ಪಡೆಯುವ ಮೊತ್ತವನ್ನು ಆಧರಿಸಿ 2020-21 ನೇ ಸಾಲಿನ ಪೂರ್ಣ ವರ್ಷಕ್ಕೆ ಅಂದಾಜಿಸಿ ಆಯವ್ಯಯವನ್ನು **ರೂ.ಗಳಲ್ಲಿ ನಮೂದಿಸಲು** ಸೂಚಿಸಿದೆ. ಈ ಸುತ್ತೋಲೆಯೊಂದಿಗೆ 2 ಅನುಬಂಧಗಳನ್ನು ಲಗತ್ತಿಸಿ ಜಿಲ್ಲಾ ಉಪನಿರ್ದೇಶಕರುಗಳಿಗೆ (ಅನುಬಂಧ-1) ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಿಗೆ (ಅನುಬಂಧ-2) ಪ್ರತ್ಯೇಕವಾಗಿ ಮಾಹಿತಿಗಳನ್ನು ನೀಡಲಾಗಿದ್ದು ಅವುಗಳನ್ನು ಸಮಗ್ರವಾಗಿ ಪರಿಶೀಲಿಸಿ 2020-21ನೇ ಸಾಲಿನ ಆಯವ್ಯಯ ಅಂದಾಜನ್ನು ನಮೂದಿಸಲು ಸೂಚಿಸಿದೆ. ಸದರಿ ಪ್ರಕ್ರಿಯೆಯನ್ನು **ದಿನಾಂಕ: 24-06-2020 ಸಂಜೆ 5.00 ಗಂಟೆಯೊಳಗಾಗಿ** ಪೂರ್ಣಗೊಳಿಸುವುದು.

**ನಿರ್ದೇಶಕರು,**
**ಪದವಿ ಪೂರ್ವ ಶಿಕ್ಷಣ ಇಲಾಖೆ.**

**ರವರಿಗೆ,**

**ಇಲಾಖೆಯ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ – ಮುಂದಿನ ಸೂಕ್ತ ಕ್ರಮಕ್ಕಾಗಿ,**

ರವರಿಗೆ,

1. ಲೆಕ್ಕಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.-ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ,